ದಿಃ 06.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಎಂ.ವಿ.ಜೆ., ವಕೀಲರಿಂದ 7 ಮತ್ತು 8 ನೇ ಪ್ರತಿವಾದಿಯರ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 09.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಕೆ.ಸಿ.ಸಿ ವಕೀಲರಿಂದ ವಾದಿಯರ ಪರವಾಗಿ

2. ನನ್ನ ತಂದಗೆ ನಾವು 11 ಜನ ಮಕ್ಕಳು. ದಾವ ಆಸ್ತಿಯನ್ನು ಖರೀದಿಸುವ ಮೊದಲು 1 ರಿಂದ 6 ನೇ ಪ್ರತಿವಾದಿಗಳಿಗೆ ಆ ವಿಚಾರವನ್ನು ತಿಳಿಸಿದ್ದೇವೆ. ಕರೀಂ ಸಾಬ್ ರವರಿಗೆ 9 ಜನ ಮಕ್ಕಳು. 9 ಮಕ್ಕಳ ಪೈಕಿ 12 ನೇ ವಾದಿ ಸಫೂರಾ ಬಿ ರವರನ್ನು ಹೊರತುಪಡಿಸಿ ಉಳಿದ ಮಕ್ಕಳು ಮೃತಪಟ್ಟಿದ್ದಾರೆ ಎಂದರೆ ಸರಿ. 1 ರಿಂದ 11, 13 ರಿಂದ 28 ನೇ ವಾದಿಗಳು ಕರೀಂ ಸಾಬ್ ರವರ ವಾರಸುದಾರರು ಎಂದರೆ ಸರಿ.

3. ನಿ.ಪಿ.1 ಪಹಣಿಯ ಪ್ರಕಾರ 2005 ರವರೆಗೂ ಸರ್ವೆ ನಂಬರ್ 34/ಪಿ2 ರಲ್ಲಿ 33 ಗುಂಟೆ ಜಮೀನು ಅಬ್ದುಲ್ ಕರೀಂ ಸಾಬ್ ರವರ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿ. ಅಬ್ದುಲ್ ಕರೀಂ ಸಾಬ್ ರವರ ಮೊದಲನೇ ಮಗನ ಹೆಸರು ಮೊಹಮದ್ ಫಕ್ರುದ್ದಿನ್ ಎಂದರೆ ಸರಿ. ಅಬ್ದುಲ್ ಕರೀಂ ಸಾಬ್ ರವರು ಮೃತಪಟ್ಟ ಬಳಿಕ ಆತನ ಮೊದಲನೇ ಮಗ ಮೊಹಮದ್ ಫಕ್ರುದ್ದಿನ್ ರವರು ದಿಃ 22.05.2006 ರಂದು M.R.No.31/2005-2006 ರಂತೆ ಪೌತಿಖಾತೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ಅಬ್ದುಲ್ ಕರೀಂ ಸಾಬ್ ರವರ ಉಳಿದ ಮಕ್ಕಳನ್ನು ಹೊರತುಪಡಿಸಿ ಮೊಹಮದ್ ಫಕ್ರುದ್ದಿನ್ ಒಬ್ಬರೇ ತನ್ನ ಹೆಸರಿಗೆ ಆಸ್ತಿಯ ಖಾತೆಯನ್ನು ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಆ ವಿಚಾರ ಎಲ್ಲಾ ಮಕ್ಕಳಿಗೆ ತಿಳಿದಿದೆ ಎಂದು ನುಡಿಯುತ್ತಾರೆ.

4. ದಾವ ಆಸ್ತಿಯನ್ನು ಖರೀದಿಸುವ ಮೊದಲು ನಾವು ಅಬ್ದುಲ್ ಕರೀಂ ಸಾಬ್ ರವರ ಮಕ್ಕಳು ಮತ್ತು ಮೊಮ್ಮಕ್ಕಳನ್ನು ವಿಚಾರಿಸಿದ್ದೇವೆ. ಅಬ್ದುಲ್ ಕರೀಂ ಸಾಬ್ ರವರಿಗೆ ಸೇರಿದ ಆಸ್ತಿಗೆ ಸಂಬಂಧಿಸಿದಂತೆ ನಾವು ಎ.ಸಿ ಮತ್ತು ಡಿ.ಸಿ ನ್ಯಾಯಾಲಯಗಳಲ್ಲಿ ಪ್ರಕರಣವನ್ನು ದಾಖಲಿಸಿಲ್ಲ. ನಮ್ಮ ತಂದೆ

ಭದ್ರುದ್ದಿನ್. ನಮ್ಮ ತಂದೆಯವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಪಾಟೀಲ್ ಹಿಮಾಮ್ ಸಾಬ್ ನನಗೆ ಗೊತ್ತು. ಪಾಟೀಲ್ ಹಿಮಾಮ್ ಸಾಬ್ ರವರ ಹೆಸರಿನಲ್ಲಿ ಇದ್ದ ಆಸ್ತಿಯ ದಾಖಲೆಗಳನ್ನು ನ್ಯಾಯಾಲಯಕ್ಕೆ ನಾವು ಹಾಜರು ಪಡಿಸಿಲ್ಲ. ಪಾಟೀಲ್ ಹಿಮಾಮ್ ಸಾಬ್ ರವರ ಆಸ್ತಿಗಳ ಮೇಲೆ ನಮಗೆ ಮತ್ತು ನಜೀರ್ ಅಹಮದ್ ರವರಿಗೆ ಹಕ್ಕು ಇದೆ ಎಂದು ಎ.ಸಿ, ಡಿ.ಸಿ ಮತ್ತು ಸಿವಿಲ್ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ದಾಖಲಿಸಿದ್ದೀರಾ ಎಂದರೆ ಸಾಕ್ಷಿ ನಾವು ದಾಖಲಿಸಿಲ್ಲ, ನಮ್ಮ ತಂದೆ ದಾಖಲಿಸಿರಬಹುದು ಎಂದು ನುಡಿಯುತ್ತಾರೆ.

5. ದಾವ ಆಸ್ತಿಯನ್ನು ಖರೀದಿಸುವ ಮೊದಲು ಆ ಆಸ್ತಿ ಮೊದಲು ಯಾರಿಗೆ ಸೇರಿತ್ತು ಎಂಬ ಬಗ್ಗೆ ವಿಚಾರಿಸಿದ್ದೇವೆ. ಆ ಬಗ್ಗೆ ವಿಚಾರಿಸಿದಾಗ ಮೊಹಮದ್ ಫಕ್ರುದ್ದಿನ್ ರವರಿಗೆ ಅಬ್ದುಲ್ ಕರೀಂ ಸಾಬ್ ರವರ ಉಳಿದ ಮಕ್ಕಳು ಧಾನ ಪತ್ರ, ವೀಲು ನಾಮೆ ಮತ್ತು ಒಪ್ಪಿಗೆ ಪತ್ರ ಬರೆದುಕೊಟ್ಟ ವಿಚಾರ ನಿಮಗೆ ತಿಳಿದಿತ್ತಾ ಎಂದರೆ ಸಾಕ್ಷಿ ತಿಳಿದಿತ್ತು ಎಂದು ನುಡಿಯುತ್ತಾರೆ. ಮೊಹಮದ್ ಫಕ್ರುದ್ದಿನ್ ರವರಿಗೆ ಅಬ್ದುಲ್ ಕರೀಂ ಸಾಬ್ ರವರ ಉಳಿದ ಮಕ್ಕಳು ಬರೆದುಕೊಟ್ಟ ಧಾನ ಪತ್ರ, ವೀಲು ನಾಮೆ ಮತ್ತು ಒಪ್ಪಿಗೆ ಪತ್ರವನ್ನು ನ್ಯಾಯಾಲಯಕ್ಕೆ ನಾವು ಹಾಜರು ಪಡಿಸಿಲ್ಲ. ನಾವು ಹಾಜರು ಪಡಿಸಿರುವ ನಿ.ಡಿ.3 ದಾಖಲೆಯಲ್ಲಿ ಬರೆದಿರುವ ವಿಚಾರವನ್ನು ನಾನು ಓದಿ ನೋಡಿದ್ದೇನೆ. ನಿ.ಡಿ.3 ದಾಖಲೆಯ 3 ನೇ ಪ್ಯಾರದಲ್ಲಿ ದಿಃ 14.06.1978 ರಂದು INH.43/2006-07 ರಂತೆ M.R.No.31/2005-2006 ರಂತೆ ಫಕ್ರುದ್ದಿನ್ ಸಾಬ್ ರವರ ಹೆಸರಿಗೆ ಖಾತೆ ಆಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ.

6. ಅಬ್ದುಲ್ ಕರೀಂ ಸಾಬ್ ರವರು ಮೊಹಮದ್ ಫಕ್ರುದ್ದಿನ್ ರವರಿಗೆ ಧಾನ ಪತ್ರ, ವೀಲು ನಾಮೆ ಮತ್ತು ಒಪ್ಪಿಗೆ ಪತ್ರವನ್ನು ಬರೆದುಕೊಟ್ಟ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ನಾನು ಆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ

ಹಾಜರು ಪಡಿಸಿಲ್ಲ ಎಂದರೆ ಸರಿ. ಅಬ್ದುಲ್ ಕರೀಂ ಸಾಬ್ ರವರು ಮೃತಪಟ್ಟ ಬಳಿಕ ಅವರ ಆಸ್ತಿಯ ಮೇಲೆ ಎಲ್ಲಾ ಮಕ್ಕಳಿಗೂ ಹಕ್ಕು ಬರುತ್ತದೆ ಎಂದರೆ ಸಾಕ್ಷಿ ಅಬ್ದುಲ್ ಕರೀಂ ಸಾಬ್ ರವರ ಮಕ್ಕಳು ತಮಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಅಬ್ದುಲ್ ಕರೀಂ ಸಾಬ್ ರವರ ಮಕ್ಕಳು ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದು ಹೇಳಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ೀ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 16.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಶ್ರೀ ಕೆ.ಸಿ.ಸಿ ವಕೀಲರಿಂದ ವಾದಿಯರ ಪರವಾಗಿ

7. ಪಾಟೀಲ್ ಹಿಮಾಮ್ ಸಾಬ್ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಿ.ಪಿ.1 ರಂತೆ ಸರ್ವೆ ನಂಬರ್ 34/ಪಿ2 ರಲ್ಲಿ ಅಬ್ದುಲ್ ಕರೀಂ ಸಾಬ್ ರವರಿಗೆ 33 ಗುಂಟೆ ಜಮೀನು ಇದೆ ಎಂದರೆ ಸರಿ. ಅಬ್ದುಲ್ ಕರೀಂ ಸಾಬ್ ಮೃತಪಟ್ಟ ಬಳಿಕ ಆತನ ಹಿರಿಯ ಮಗ ಮೊಹಮದ್ ಫಕ್ರುದ್ದಿನ್ ರವರಿಗೆ ನಿ.ಪಿ.2 ರಂತೆ ಸರ್ವೆ ನಂಬರ್ 34/ಪಿ2 ರ ಪೌತಿ ಖಾತೆ ಆಗಿದೆ ಎಂದರೆ ಸುಳ್ಳು. ಮೊಹಮದ್ ಫಕ್ರುದ್ದಿನ್ ರವರು ತಮಗೆ ಬಂದ 33 ಗುಂಟೆ ಜಮೀನಿನ ಪೈಕಿ ನನಗೆ 16 ಗುಂಟೆ ಜಮೀನನ್ನು ಮತ್ತು 8 ನೇ ಪ್ರತಿವಾದಿಗೆ 17 ಗುಂಜೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಿ.ಪಿ.4 ಮತ್ತು 5 ರಂತೆ ನನ್ನ ಮತ್ತು 8 ನೇ ಪ್ರತಿವಾದಿಯ ಹೆಸರಿಗೆ 16 ಗುಂಟೆ ಮತ್ತು 17 ಗುಂಟೆ ಜಮೀನುಗಳು ಸರ್ವೆ ನಂಬರ್ 34/ಪಿ2 ರಲ್ಲಿ ಖಾತೆ ಆಗಿವೆ ಎಂದರೆ ಸರಿ. ಈ ದಾವೆಯಲ್ಲಿ ತೋರಿಸಿರುವ ಆಸ್ತಿಗಳಿಗೆ ಸಂಬಂಧಿಸಿದಂತೆಯೇ ಮೊಹಮದ್ ಫಕ್ರುದ್ದಿನ್ ನಮಗೆ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ.

8. ಮೊಹಮದ್ ಫಕ್ರುದ್ದಿನ್ ರವರಿಗೆ ಸಂಪೂರ್ಣ ದಾವ ಆಸ್ತಿಯನ್ನು ನಮಗೆ ಮಾರಾಟ ಮಾಡುವ ಹಕ್ಕು ಹೊಂದಿರಲಿಲ್ಲ ಎಂದರೆ ಸುಳ್ಳು. ಮೊಹಮದ್ ಫಕ್ರುದ್ದಿನ್ ರವರಿಗೆ ತಮಗೆ ಇರುವ ಹಕ್ಕನ್ನು ಮಾತ್ರ ಮಾರಾಟ ಮಾಡುವ ಹಕ್ಕು ಇತ್ತು, ಎಲ್ಲಾ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸುಳ್ಳು. ಅಬ್ದುಲ್ ಕರೀಂ ಸಾಬ್ ರವರಿಗೆ ಇದ್ದ ಆಸ್ತಿಯ ಮೇಲೆ ನಮಗೆ ಹಕ್ಕು ಇದೆ ಎಂದು ನಾವು ಯಾವುದೇ ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಾವು ಅಬ್ದುಲ್ ಕರೀಂ ಸಾಬ್ ರವರ ಕುಟುಂಬಕ್ಕೆ ಸೇರಿದವರು ಎಂದು ತೋರಿಸಲು ದಾಖಲೆಯನ್ನು

ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ರೀತಿಯ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. 1 ರಿಂದ 6 ನೇ ಪ್ರತಿವಾದಿಯರು ಮೊಹಮದ್ ಫಕೃದ್ದಿನ್ ರವರ ಮಕ್ಕಳು ಎಂದರೆ ಸರಿ . ವಾದಿಯರು ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರು ಎಂದರೆ ಸರಿಯಲ್ಲ. ದಾವೆಯಲ್ಲಿ ಹಾಜರು ಪಡಿಸಿರುವ ದಾಖಲೆಗಳು ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ. ನಿ.ಡಿ.3 ಕ್ರಯ ಪತ್ರವನ್ನು ಬರೆದುಕೊಡಲು ಮೊಹಮದ್ ಫಕೃದ್ದಿನ್ ರವರಿಗೆ ಯಾವುದೇ ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ನಿ.ಡಿ.1 ಮತ್ತು 2 ದಾಖಲೆಗಳು ಊರ್ಜಿತ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ